**APRIL 04, 2026**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ಬಾಬು ಜಗಜೀವನ ರಾಮ್ ಪ್ರಶಸ್ತಿ:** ರಾಯಚೂರು ಜಿಲ್ಲೆಯ, ಡಿಂಗ್ರಿ ನರಸಪ್ಪ ಹಾಗೂ ಬೆಳಗಾವಿಯ ಸರಜೂ ಕಾಟಕರ, ಸೇರಿದಂತೆ ಐವರು ಗಣ್ಯರು ಭಾಜನ.

**ಮನಮೋಹನ ಸಿಂಗ್,** ಬೆಂಗಳೂರು ನಗರ ವಿಶ್ವವಿದ್ಯಾಲಯದ ಘಟಿಕೋತ್ಸವ ಇಂದು; ಖ್ಯಾತ ಕ್ರಿಕೆಟಿಗ ವೆಂಕಟೇಶ ಪ್ರಸಾದ, ಸೇರಿ, 6 ಗಣ್ಯರಿಗೆ, ಗೌರವ ಡಾಕ್ಟರೇಟ್.

**ಭಾರತೀಯ ರೇಲ್ವೆ, ಮೈಸೂರು ವಿಭಾಗ,** ಹಂತ–ಹಂತವಾಗಿ ಡೀಸೆಲ್ ಮುಕ್ತ ರೈಲು ಇಂಜೀನ್‌ಗಳನ್ನು ಹೊಂದಲಿದೆ – ವಿಭಾಗೀಯ ರೇಲ್ವೆ ವ್ಯವಸ್ಥಾಪಕರ, ಮಾಹಿತಿ.

**ವಿಜಯನಗರ ಜಿಲ್ಲೆಯಲ್ಲಿ,** ಗ್ರಾಹಕರಿಗೆ, ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ್ ಪೂರೈಕೆ, ಸುಗಮ.

<><><>

**ಈಗ ವಾರ್ತೆಗಳ ವಿವರ**

<><><>

**ರಾಯಚೂರು ಜಿಲ್ಲೆ,** ಆಶಾಪುರದ ಡಿಂಗ್ರಿ ನರಸಪ್ಪ, ಬೆಳಗಾವಿಯ ಸರಜೂ ಕಾಟಕರ, ಬೆಂಗಳೂರಿನ ಚಂದ್ರಮ್ಮ, ಮೈಸೂರಿನ ನಾರಾಯಣ ಹಾಗೂ ತುಮಕೂರಿನ ನರಸೀಯಪ್ಪ, ಪ್ರತಿಷ್ಠಿತ ಬಾಬು ಜಗಜೀವನ ರಾಮ್ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿ, 5 ಲಕ್ಷ ರೂಪಾಯಿ ನಗದು, 20 ಗ್ರಾಂ ಚಿನ್ನದ ಪದಕವನ್ನು ಒಳಗೊಂಡಿದೆ. ಬೆಂಗಳೂರಿನ ವಿಧಾನಸೌಧದ ಪೂರ್ವ ದ್ವಾರದ, ಭವ್ಯ ಮೆಟ್ಟಿಲುಗಳ ಮೇಲೆ, ನಾಡಿನ ಐವರು ಹಿರಿಯ ಸಾಧಕರಿಗೆ, ನಾಳೆ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸುವರು ಎಂದು, ಸಮಾಜ ಕಲ್ಯಾಣ ಖಾತೆ ಸಚಿವ, ಎಚ್.ಸಿ. ಮಹದೇವಪ್ಪ ತಿಳಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿದ್ದಾರೆ.

<><><>

**ಮನಮೋಹನ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ,** ಖ್ಯಾತ ಕ್ರಿಕೆಟಿಗ ವೆಂಕಟೇಶ ಪ್ರಸಾದ, ಸಂಗೀತ ನಿರ್ದೇಶಕ ಅರ್ಜುನ ಜನ್ಯ ಸೇರಿದಂತೆ, 6 ಗಣ್ಯರಿಗೆ, ಗೌರವ ಡಾಕ್ಟರೇಟ್ ಪ್ರಕಟಿಸಿದೆ. ಜ್ಞಾನಜ್ಯೋತಿ ಸಭಾಂಗಣದಲಿ ಇಂದು, 5ನೇ ಘಟಿಕೋತ್ಸವ ಆಯೋಜಿತವಾಗಿದ್ದು, ಕುಲಾಧಿಪತಿ ಥಾವರಚಂದ ಗೆಹ್ಲೋಟ, ಅಧ್ಯಕ್ಷತೆ ವಹಿಸಿ, ಪದವಿಗಳನ್ನು ಪ್ರದಾನಿಸಲಿದ್ದಾರೆ. ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ – ಡಿ.ಆರ್.ಡಿ..ಓ. ಇಲೆಕ್ಟ್ರಾನಿಕ್ಸ್ ಹಾಗೂ ಕಮ್ಯುನಿಕೇಷನ್ಸ್ ವಿಭಾಗದ ಮುಖ್ಯಸ್ಥ, ಬಿನಯಕುಮಾರ ದಾಸ್, ದಿಕ್ಸೂಚಿ ಭಾಷಣ ಮಾಡಲಿದ್ದಾರೆ.

<><><>

**ಕೊಲ್ಲಿ ಹಾಗೂ ಮಧ್ಯಪ್ರಾಚ್ಯ ದೇಶಗಳ** ಮಧ್ಯದ ಸಂಘರ್ಷದ ಹಿನ್ನೆಲೆ, ಡೀಸೆಲ್ ಉಳಿತಾಯಕ್ಕೆ, ಭಾರತೀಯ ರೇಲ್ವೆ ವ್ಯಾಪಕ ಕ್ರಮಗಳನ್ನು ಕೈಗೊಂಡಿದೆ. ಮೈಸೂರು ವಿಭಾಗೀಯ ರೇಲ್ವೆ ವ್ಯವಸ್ಥಾಪಕ, ಮುದಿತ್ ಮಿತ್ತಲ್, ಮೈಸೂರಿನಲ್ಲಿ ಮಾಹಿತಿ ನೀಡಿ, 44 ಡಿಸೇಲ್ ಇಂಜಿನ್‌ಗಳನ್ನು, ವಿದ್ಯುತ್ ಚಾಲಿತಗಳಾಗಿ ಪರಿವರ್ತಿಸಲಾಗಿದೆ. ಹಂತ–ಹಂತವಾಗಿ ಶೇಕಡ 100ರಷ್ಟು ಡೀಸೆಲ್ ಮುಕ್ತ ಇಂಜಿನ್‌ಗಳನ್ನು ಹೊಂದುವ ಗುರಿ ಇದೆ ಎಂದರು. ಗುಡ್ಡಗಾಡಿನ ಮಧ್ಯದ ಸಕಲೇಶಪುರ ಹಾಗೂ ಸುಬ್ರಮಣ್ಯ ರೈಲು ನಿಲ್ದಾಣದ ಮೂಲಕ, ಬೆಂಗಳೂರು ಹಾಗೂ ಮಂಗಳೂರು ನಡುವೆ, ಶೀಘ್ರ ಇಲೆಕ್ಟ್ರಿಕ್ ರೈಲು ಸಂಚಾರ ಆರಂಭವಾಗಲಿದೆ, ಎಂದು ತಿಳಿಸಿದರು.

<><><>

**ವಿಜಯನಗರ ಜಿಲ್ಲೆಯಲ್ಲಿ, ಗೃಹ ಬಳಕೆ ಅಡುಗೆ ಅನಿಲ** ಪೂರೈಕೆ ಸುಗಮವಾಗಿದೆ. ಗ್ರಾಹಕರು ಪ್ರತಿ 25 ದಿನಗಳ ಬಳಿಕ, ಮತ್ತೊಂದು ಸಿಲಿಂಡರ್‌ಗೆ ಹೆಸರು ನೋಂದಾಯಿಸಿ, ಪಡೆಯಬಹುದು. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹಿಂದೂಸ್ತಾನ್ ಪೆಟ್ರೋಲಿಯಂ ಅಡುಗೆ ಅನಿಲ ವಿತರಕ ವೆಂಕಟ ರಾಘವನ್.

<><><>

**ವೆಂಕಟ ರಾಘವನ್ ಧ್ವನಿ –26 ಸೆಕೆಂದುಗಳು**

<><><>

**ವಿಜಯನಗರದ ಗೃಹಿಣಿ ಹಾಗೂ ಗೃಹ ಬಳಕೆ ಸಿಲಿಂಡರ್ ಗ್ರಾಹಕಿ,** ಅನುರಾಧಾ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಅನುರಾಧಾ ಧ್ವನಿ 11 ಸೆಕೆಂದುಗಳು**

<><><>

**ಹಿಂಗಾರು ಹಂಗಾಮಿಗೆ,** ಇಂದಿನಿಂದ, ಈ ತಿಂಗಳ 7ನೇ ತಾರಿಖೀನ ವರೆಗೆ, ಯಾದಗಿರಿ ಜಿಲ್ಲೆ, ಶಹಾಪುರ, ಜೇವರ್ಗಿ ಹಾಗೂ ಮುಡಬಾಳ ಶಾಖಾ ಕಾಲುವೆ ಮೂಲಕ, ನೀರು ಹರಿಸಲಾಗುವುದು ಎಂದು, ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತದ, ಅಧೀಕ್ಷಕ ಅಭಿಯಂತರ, ತಿಪ್ಪಣ್ಣಗೌಡ ಅನ್ನದಾನಿ ತಿಳಿಸಿದ್ದಾರೆ. ರೈತ ಸಂಘಟನೆಗಳು ನೀರು ಪೂರೈಕೆ ಅವಧಿ ವಿಸ್ತರಣೆಗಾಗಿ ಮನವಿ ಸಲ್ಲಿಸಿದ ಹಿನ್ನೆಲೆ, ಜಲಾಶಯದ ನೀರಿನ ಲಭ್ಯತೆ ಹಾಗೂ ನೀರಾವರಿ ಸಲಹಾ ಸಮಿತಿ ಅನುಮೋದನೆಯೊಂದಿಗೆ, ನಾಲ್ಕು ದಿನಗಳ ಕಾಲ, ಯಾದಗಿರಿ ಜಿಲ್ಲೆ, ಹುಣಸಗಿ ತಾಲೂಕು, ನಾರಾಯಣಪುರದ ಬಸವಸಾಗರ ಜಲಾಶಯದಿಂದ, ನೀರು ಹರಿಸಲು ನಿರ್ಧರಿಸಲಾಗಿದೆ.

<><><>

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(40 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಚಿಕ್ಕಮಗಳೂರು ಜಿಲ್ಲೆ,** ಕೊಟ್ಟಿಗೆಹಾರದ, ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನಕ್ಕೆ ಲೋಕೋಪಯೋಗಿ ಖಾತೆ ಸಚಿವ ಸತೀಶ ಜಾರಕಿಹೊಳಿ, ಭೇಟಿ ನೀಡಿ, ಪೂರ್ಣಚಂದ್ರ ತೇಜಸ್ವಿ ಅವರ ಪುಸ್ತಕಗಳು, ಅವರು ಬಳಸಿದ ವಸ್ತುಗಳನ್ನು ವೀಕ್ಷಿಸಿ, ಮೆಚ್ಚುಗೆ ವ್ಯಕ್ತಪಡಿಸಿದರು. ಚಿಕ್ಕಮಗಳೂರು ಬಳಿಯ, ದಂಬದ ಹಳ್ಳಿಯಿಂದ ಮೂಡಿಗೆರೆ ವರೆಗೆ, ರಸ್ತೆ ಅಭಿವೃದ್ಧಿಗಾಗಿ, 403 ಕೋಟಿ ರೂಪಾಯಿ, ಬಿಡುಗಡೆಯಾಗಿದೆ, ಎಂದರು.

<><><>

**ಭಾರತದ ಮೆಕ್ಕೆಜೋಳಕ್ಕೆ ವಿಶ್ವದ** ಮಾರುಕಟ್ಟೆಗಳಲ್ಲಿ ಬೇಡಿಕೆ ಹೆಚ್ಚಿದೆ. ಕಳೆದ 2025ರ ಅಕ್ಟೋಬರ್, ನವೆಂಬರ್ ಹಾಗೂ ಡಿಸೆಂಬರ್ ತಿಂಗಳಿನಲ್ಲಿ, ಒಟ್ಟು 4 ಲಕ್ಷ ಟನ್ ಮೆಕ್ಕೆಜೋಳ ರಫ್ತಾಗಿದೆ ಎಂದು, ಹಾವೇರಿ–ಗದಗ ಸಂಸದ ಬಸವರಾಜ ಬೊಮ್ಮಾಯಿ, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ. ವಿಶ್ವದ ಹಲವು ರಾಷ್ಟ್ರಗಳಲ್ಲಿ, ಭಾರತೀಯ ಕೃಷಿ ಉತ್ಪನ್ನದ ಬೇಡಿಕೆಯನ್ನು ಗುರುತಿಸಬಹುದು. ಆತ್ಮನಿರ್ಭರ ಮತ್ತು ಬಲಿ ್ಠ ಭಾರತದ ಚಿತ್ರಣವಾಗಿದೆ ಎಂದು, ಶ್ಲಾಘಿಸಿದ್ದಾರೆ.

<><><>

**ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ,** ಈ ತಿಂಗಳ 25 ರಿಂದ 29ರ ವರೆಗೆ, ಹುಬ್ಬಳ್ಳಿಯ ಅಮರಗೋಳದ, ಶ್ರೀ ಜಗಜ್ಯೋತಿ ಬಸವೇಶ್ವರ ಕೃಷಿ ಉತ್ಪನ್ನ ಹುಟ್ಟುವಳಿ ಮಾರಾಟ ಕೇಂದ್ರ – ಎ.ಪಿ.ಎಂ.ಸಿ. ಆವರಣದ, ಧಾರವಾಡ ವಿವಿಧೋದ್ದೇಶ ವಸ್ತು ಪ್ರದರ್ಶನ ಕೇಂದ್ರದಲ್ಲಿ, ಬೃಹತ್ ಕೈಗಾರಿಕಾ ವಸ್ತು ಪ್ರದರ್ಶನ, ಇನ್ ಕಾಮೆಕ್ಸ್ 2026 ಆಯೋಜಿಸಿದೆ. ತನ್ನಿಮಿತ್ತ ಇಂದು ಸಂಜೆ 5 ಗಂಟೆಗೆ, ಚೇಂಬರ್ ಆಫ್ ಕಾಮರ್ಸ್ ನ, ಚಂದ್ರವದನ ದೇಸಾಯಿ ಸಭಾಗೃಹದಲ್ಲಿ, ಪೂರ್ವಭಾವಿ ಚಾಲನೆ ಕಾರ್ಯಕ್ರಮ ಜರುಗಲಿದೆ. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಲಾಡ, ಸೇರಿದಂತೆ ಅನೇಕ, ಗಣ್ಯರು ಪಾಲ್ಗೊಳ್ಳಲಿದ್ದಾರೆ.

<><><>

**ಛತ್ತೀಸ್‌ಘಡದ, ರಾಯಪುರದಲ್ಲಿ ಮುಕ್ತಾಯಗೊಂಡ,** ಖೇಲೋ ಇಂಡಿಯಾ ಬುಡಕಟ್ಟು ಕ್ರೀಡಾಕೂಟದಲ್ಲಿ, ಕರ್ನಾಟಕ ರಾಜ್ಯ, ಒಟ್ಟು 23 ಚಿನ್ನದ ಪದಕಗಳನ್ನು ಜಯಿಸಿ, ಪದಕ ಪಟ್ಟಿಯಲ್ಲಿ, ಅಗ್ರಸ್ಥಾನ ದಾಖಲಿಸಿದೆ. 76 ಕಿಲೋ ಗ್ರಾಂ ತೂಕದವರ ವಿಭಾಗದ ಕುಸ್ತಿ ಪಂದ್ಯದಲ್ಲಿ, ಉತ್ತರಕನ್ನಡ ಜಿಲ್ಲೆ, ಹಳಿಯಾಳ ತಾಲೂಕಿನ, ಮನೀಷಾ ಜುವಾವಾ ಸಿದ್ದಿ ಚಿನ್ನದ ಸಾಧನೆಗೈದರು. ಪ್ರದೇಶ ಸಮಾಚಾರಕ್ಕಾಗಿ ಅವರು ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

**ಮನೀಷಾ ಸಿದ್ದಿ ಧ್ವನಿ– 31 ಸೆಕೆಂದುಗಳು**

<><><>

**ಕೊಡವ ಕುಟುಂಬಗಳ ಮಧ್ಯದ,** 24ನೇ ಆವೃತ್ತಿಯ, 'ಬೇತ್ರಿ ಮುಕ್ಕಾಟಿರ ಕಪ್, ಕ್ರಿಕೆಟ್ ನಮ್ಮೆ –2026' ಕ್ಕೆ, ಮೂರ್ನಾಡು ಗ್ರಾಮದಲ್ಲಿ, ಕೊಡವ ಕ್ರಿಕೆಟ್ ಅಸೋಸಿಯೇ ´ನ್ ಅಧ್ಯಕ್ಷ, ಕೀತಿಯಂಡ ಕಾರ್ಸನ್ ಕಾರ್ಯಪ್ಪ ಚಾಲನೆ ನೀಡಿದರು. ಈ ಬಾರಿ 289 ತಂಡಗಳು ಪಾಲ್ಗೊಂಡಿದ್ದು, ಮೇ 1 ರಂದು ಫೈನಲ್ ಪಂದ್ಯ ಜರುಗಲಿದೆ.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

**ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ,** ಉಪಚುನಾವಣೆಯ, ಎನ್.ಡಿ.ಎ ಅಭ್ಯರ್ಥಿ ಪರ, ಕೇಂದ್ರ ಬೃಹತ್ ಕೈಗಾರಿಕೆ ಖಾತೆ ಸಚಿವ ಹೆಚ್.ಡಿ ಕುಮಾರಸ್ವಾಮಿ ಇಂದು, ಮತಯಾಚಿಸಲಿದ್ದಾರೆ.

**ಬಾಗಲಕೋಟೆ ವಿಧಾನಸಭಾ ಕ್ಷೇತ್ರದ, ಉಪ ಚುನಾವಣೆ** ಹಿನ್ನಲೆ, 85 ವ ´೯ ಮೇಲ್ಪಟ್ಟವರು ಹಾಗೂ ವಿಶೇ ´ ಚೇತನರಿಗಾಗಿ, ಕಳೆದ 1 ಹಾಗೂ 2ನೇ ತಾರೀಖಿನಂದು ನಡೆದ ಮತದಾನದಲ್ಲಿ, ಶೇಕಡ 95 ದಶಾಂಶ 2–3ರ ್ಟ ಮತದಾನವಾಗಿದೆ ಎಂದು, ಜಿಲ್ಲಾ ಚುನಾವಣಾಧಿಕಾರಿ ಸಂತೋ ´ ಜಗಲಾಸರ ತಿಳಿಸಿದ್ದಾರೆ.

**ಐ.ಎ.ಎಸ್. ಪರೀಕ್ಷೆಯಲ್ಲಿ,** ರಾಜ್ಯಕ್ಕೆ ಪ್ರಥಮ ಹಾಗೂ ರಾಷ್ಟ್ರಕ್ಕೆ 53 ನೇ ರ್‍ಯಾಂಕ್ ಗಳಿಸಿದ, ಗದಗ ಜಿಲ್ಲೆಯ ಕಿರಣ ಕಮತೆ ಹಾಗೂ ಅವರ ಪಾಲಕರಾದ ಸಣ್ಣಪ್ಪ ಮತ್ತು ರುಕ್ಮಿಣಿ ಕಮತೆ ಅವರನ್ನು, ವಿಧಾನ ಪರಿಷತ್ ಶಾಸಕ, ಎಸ್.ವಿ. ಸಂಕನೂರ, ಗದಗನ ತಮ್ಮ ಗೃಹ ಕಚೇರಿಯಲ್ಲಿ ಸನ್ಮಾನಿಸಿದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ಬಾಬು ಜಗಜೀವನ ರಾಮ್ ಪ್ರಶಸ್ತಿ:** ರಾಯಚೂರು ಜಿಲ್ಲೆಯ, ಡಿಂಗ್ರಿ ನರಸಪ್ಪ ಹಾಗೂ ಬೆಳಗಾವಿಯ ಸರಜೂ ಕಾಟಕರ, ಸೇರಿದಂತೆ ಐವರು ಗಣ್ಯರು ಭಾಜನ.

**ಮನಮೋಹನ ಸಿಂಗ್,** ಬೆಂಗಳೂರು ನಗರ ವಿಶ್ವವಿದ್ಯಾಲಯದ ಘಟಿಕೋತ್ಸವ ಇಂದು; ಖ್ಯಾತ ಕ್ರಿಕೆಟಿಗ ವೆಂಕಟೇಶ ಪ್ರಸಾದ, ಸೇರಿ, 6 ಗಣ್ಯರಿಗೆ, ಗೌರವ ಡಾಕ್ಟರೇಟ್.

**ಭಾರತೀಯ ರೇಲ್ವೆ, ಮೈಸೂರು ವಿಭಾಗ,** ಹಂತ–ಹಂತವಾಗಿ ಡೀಸೆಲ್ ಮುಕ್ತ ರೈಲು ಇಂಜೀನ್‌ಗಳನ್ನು ಹೊಂದಲಿದೆ – ವಿಭಾಗೀಯ ರೇಲ್ವೆ ವ್ಯವಸ್ಥಾಪಕರ, ಮಾಹಿತಿ.

**ವಿಜಯನಗರ ಜಿಲ್ಲೆಯಲ್ಲಿ,** ಗ್ರಾಹಕರಿಗೆ, ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ್ ಪೂರೈಕೆ, ಸುಗಮ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>